# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೇಂಟ್/ಉಪಲೋಕ್/ಬಿಜಿಎಂ/1811/2021
ಪಿ.ಓ. ಎಆರ್ಇ–06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:06/04/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ. ನಿಜಲಿಂಗಪ್ಪ ಸಾಂಬಾ ಬಿನ್ ಬಸವಂತರಾಯ ಸಾಂಬಾ, ಕಾರ್ಯನಿರ್ವಾಹಕ ಇಂಜಿನಿಯರ್, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಇಂಡಿ ಶಾಖಾ ಕಾಲುವೆ ವಿಭಾಗ–2, ಅಲಮೇಲ ಮತ್ತು ಹೆಚ್ಚುವರಿಯಾಗಿ ಸೂಪರಿಂಟೆಂಡಿಂಗ್ ಇಂಜಿನಿಯರ್, ಕೆ.ಬಿ.ಜೆ.ಎನ್.ಎಲ್. ನಿರ್ವಹಣೆ ಮತ್ತು ಘೋಷಣೆ ವೃತ್ತ–2 ರಾಂಪೂರ (ಪ.ಅ.), ವಿಜಯಪುರ ಜಿಲ್ಲೆರವರು** ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

****

1. ವಿಜಯಪುರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ ಶ್ರೀ. **ನಿಜಲಿಂಗಪ್ಪ ಸಾಂಬಾ ಬಿನ್ ಬಸವಂತರಾಯ ಸಾಂಬಾ, ಕಾರ್ಯನಿರ್ವಾಹಕ ಇಂಜಿನಿಯರ್, ಕೃಷ್ಣಾ ಭಾಗ್ಯ** ಜಲ **ನಿಗಮ ನಿಯಮಿತ, ಇಂಡಿ ಶಾಖಾ ಕಾಲುವೆ ವಿಭಾಗ–2, ಅಲಮೇಲ ಮತ್ತು ಹೆಚ್ಚುವರಿಯಾಗಿ ಸೂಪರಿಂಟೆಂಡಿಂಗ್ ಇಂಜಿನಿಯರ್, ಕೆ.ಬಿ.ಜೆ.ಎನ್.ಎಲ್. ನಿರ್ವಹಣೆ ಮತ್ತು ಘೋಷಣೆ ವೃತ್ತ–2 ರಾಂಪೂರ (ಪ.ಅ.), ವಿಜಯಪುರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). **ಶ್ರೀ. ಬಾಬು ಬಿನ್ ಈರಪ್ಪ ಬಿಜ್ಜರಗಿ, ಗುತ್ತಿಗೆದಾರರು, ವಾಸ: ಅಲಮೇಲ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. ಪ್ರಕರಣದ ಸಂಕ್ಷಿಪ್ತ ಸಾರಾಂಶ :-

i) ದೂರುದಾರರಾದ ಶ್ರೀ. ಬಾಬು ಬಿನ್ ಈರಪ್ಪ ಬಿಜ್ಜರಗಿರವರು ಪ್ರಥಮ ದರ್ಜೆ ಗುತ್ತಿಗೆದಾರರಾಗಿ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದು, 2014ನೇ ಸಾಲಿನಿಂದ 2018ನೇ ಸಾಲಿನವರೆಗೆ ದೂರುದಾರರು ಕನಸ್ಟ್ರಕ್ಷನ್ ಆಫ್ ಲ್ಯಾಟ್ರಲ್ ನಂ.4 ಮತ್ತು ಎಸ್.ಎಲ್.ನಂ.1 ಆಫ್ ಎಲ್.4 ಡಿಸ್ಟ್ರಿಬ್ಯೂಟರ್ ನಂ.57 ಆಫ್ ಇಂಡಿ ಲಿಫ್ಟ್ ಕೆನಾಲ್ ಕಾಮಗಾರಿಯನ್ನು ಇಂಡಿ ತಾಲ್ಲೂಕಿನ ಸಾಲೂಟಗಿ ಗ್ರಾಮದ ಬಳಿ ಪೂರ್ಣಗೊಳಿಸಿರುತ್ತಾರೆ. ಸದರಿ ಕಾಮಗಾರಿಯ ಮೊತ್ತ 1,96,00,000/- ರೂ.ಗಳು ಆಗಿರುತ್ತದೆ. ದಿ: 05/10/2015 ರಂದು ಕಾಮಗಾರಿ ಪೂರ್ಣಗೊಳಿಸಿದ ಬಗ್ಗೆ ದೂರುದಾರರು ಎದುರುದಾರರಿಗೆ ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಈ ಕಾಮಗಾರಿಗೆ ಸಂಬಂಧಿಸಿದ ಒಟ್ಟು ಹಣದಲ್ಲಿ ಶೇಕಡ 6.5ರಷ್ಟು ಎಫ್.ಎಸ್.ಡಿ. ಕಡಿತಗೊಳಿಸಿ, ಉಳಿದ ಹಣವನ್ನು ಎರಡು ಕಂತಿನಲ್ಲಿ ದಿ: 05/10/2015ರ ಮೊದಲೇ ಇಲಾಖೆಯಿಂದ ದೂರುದಾರರಿಗೆ ಸಂದಾಯವಾಗಿರುತ್ತದೆ. ಇಲಾಖೆಯಿಂದ ಎಫ್.ಎಸ್.ಡಿ. ಮತ್ತು ಇ.ಎಂ.ಡಿ. ಹಣ ಒಟ್ಟು 16,08,248/- ರೂ.ಗಳು ಬರಬೇಕಾಗಿದ್ದು, ದೂರುದಾರರು ಅವರಿಗೆ ಬರಬೇಕಾದ ಹಣದ ಬಗ್ಗೆ ಮತ್ತು ಬೇರೊಂದು ಕಾಮಗಾರಿಯ ಬಗ್ಗೆ ಕೇಳಲು ದಿ: 05/04/2018 ರಂದು ಅವರ ಮೊಬೈಲ್‌ನಿಂದ ಎದುರುದಾರರ ಮೊಬೈಲ್ ನಂ.94481 81053ಕ್ಕೆ ಕರೆಮಾಡಿ ವಿಚಾರಿಸಿದಾಗ, ಎದುರುದಾರರು ಅವರ ಮನೆಗೆ ಬರುವಂತೆ ತಿಳಿಸಿರುತ್ತಾರೆ. ಅದರಂತೆ ದೂರುದಾರರು ದಿ: 06/04/2018ರಂದು ಎದುರುದಾರರನ್ನು ಅವರ ಮನೆಯಲ್ಲಿ ಭೇಟಿಯಾಗಿದ್ದು, ಆಗ ಎದುರುದಾರರು ದೂರುದಾರರನ್ನು ಅವರ ಕಚೇರಿಗೆ ಕರೆದುಕೊಂಡು ಬಂದಿದ್ದು, ಬರುವಾಗ ದಾರಿಯಲ್ಲಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾತನಾಡಿ, ಇಲಾಖೆಯಿಂದ ಬರಬೇಕಾದ ಮೊತ್ತ ಬಿಡುಗಡೆ ಮಾಡಲು ಶೇಕಡ 1ರಂತೆ ಲಂಚದ ಹಣ (17,000/- ರೂ.ಗಳು) ಆಗುತ್ತದೆ, ದಿ: 07/04/2018ರಂದು ಲಂಚದ ಹಣ ತೆಗೆದುಕೊಂಡು ಬರುವಂತೆ ತಿಳಿಸಿದಾಗ ದೂರುದಾರರು 10,000/- ರೂ. ಕೊಡುವುದಾಗಿ ಹೇಳಿರುತ್ತಾರೆ. ದೂರುದಾರರ ತಾಯಿಯವರಿಗೆ ಹುಶಾರಿಲ್ಲದೆ ತೀರಿಕೊಂಡಿರುತ್ತಾರೆ. ದೂರುದಾರರು ನಂತರ ಅವರ ಮೊಬೈಲ್‌ನಿಂದ ಎದುರುದಾರರ ಮೊಬೈಲ್‌ಗೆ ಕರೆಮಾಡಿದಾಗ ಎದುರುದಾರರು ವಿಜಯಪುರಕ್ಕೆ ಲಂಚದ ಹಣ ತೆಗೆದುಕೊಂಡು ಬರಲು ತಿಳಿಸಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ್ದರಿಂದ, ದಿ: 21/04/2018ರಂದು ವಿಜಯಪುರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರಿಗೆ ಲಿಖಿತ ದೂರನ್ನು ನೀಡಿರುತ್ತಾರೆ. ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.04/2018 ರಲ್ಲಿ ಕಲಂ 7, 13 (1) (ಡಿ) ಸಹಿತ 13(2) ಭ್ರಷ್ಟಾಚಾರ

ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 21/04/2018ರಂದು ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ತನಿಖಾಧಿಕಾರಿಯವರು ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ, ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ದೂರುದಾರರು ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅವರು ಆ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ನಂತರ ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗಳಿಗೆ ವರ್ಗಾಯಿಸಿ, ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ಎದುರುದಾರರಿಗೆ ಲಂಚದ ಹಣವಾಗಿ ನೀಡಬೇಕಾಗಿರುವ 10,000/- ರೂ. ಗಳನ್ನು (2,000/- ರೂ. ಮುಖಬೆಲೆಯ ನಾಲ್ಕು ನೋಟುಗಳು ಮತ್ತು 500/- ರೂ. ಮುಖಬೆಲೆಯ ಎರಡು ನೋಟುಗಳು) ದೂರುದಾರರು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-1ರವರು ಆ ನೋಟುಗಳ ವಿವರಗಳನ್ನು ಪಂಚಸಾಕ್ಷಿ-2ರವರಿಗೆ ಹೇಳಿದಂತೆ ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆಯಂತೆ ಸಿಬ್ಬಂದಿ, ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-2ರವರು ಪುಡಿಲೇಪಿತ ನೋಟುಗಳನ್ನು ದೂರುದಾರರು ಧರಿಸಿದ್ದ ಶರ್ಟಿನ ಎಡಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿಹೋಗಿ ಎಫ್.ಎಸ್.ಡಿ. ಮತ್ತು ಇ.ಎಂ.ಡಿ. ಹಣ ಬಿಡುಗಡೆ ಮಾಡಲು ಕೇಳುವಂತೆ ಆಗ ಲಂಚದ ಹಣಕ್ಕೆ ಒತ್ತಾಯ ಮಾಡಿದರೆ, ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ಕೊಡುವಂತೆ, ಅವರಿಗೆ ನೀಡಿದಾಗ ಅದನ್ನು ಯಾವರೀತಿಯಲ್ಲಿ ಪಡೆದುಕೊಳ್ಳುತ್ತಾರೆ, ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ಹೊರಬಂದು ದೂರುದಾರರು ಅವರ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರ ಜೊತೆಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಧ್ವನಿಮುದ್ರಕವನ್ನು ನೀಡಿ ಎದುರುದಾರರ ಬಳಿ ಹೋಗುವಾಗ ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ತಿಳಿಸಿರುತ್ತಾರೆ. ಇತರೆ

ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

ದಿ: 21/04/2017ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಎದುರುದಾರರ ಮನೆ ಬಳಿಯಿರುವ ಬಿ.ಎಲ್.ಡಿ.ಇ. ಇಂಜಿನಿಯರಿಂಗ್ ಕಾಲೇಜ್ ಹತ್ತಿರ ಬಂದು ಮರೆಯಲ್ಲಿ ನಿಂತಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ ಎದುರುದಾರರ ಮನೆಯ ಬಳಿ ಕಳುಹಿಸಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಮನೆಯ ಕಡೆ ಹೋಗುತ್ತಿರುವಾಗ ಎದುರುದಾರರು ಅವರ ಮನೆಯ ಹೊರಗಡೆ ಇರುವ ಕ್ರಾಸ್ ರಸ್ತೆಯ ಮೇಲೆ ನಿಂತಿದ್ದು, ದೂರುದಾರರನ್ನು ನೋಡಿ ಮಾತನಾಡಿಸಿ, ಮಾತನಾಡುತ್ತಾ ಚಹ ಕುಡಿಯಲು ಹೋಟೆಲ್‌ಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಎದುರುದಾರರು ಮಜ್ಜಿಗೆಗೆ ಆರ್ಡರ್ ಮಾಡಿದ್ದು, ಆಗ ದೂರುದಾರರು ಅವರಿಗೆ ಬರಬೇಕಾದ ಇ.ಎಂ.ಡಿ. ಮತ್ತು ಎಫ್.ಎಸ್.ಡಿ. ಬಿಲ್‌ಗೆ ಸಹಿಮಾಡಲು ಕೇಳಿಕೊಂಡಾಗ, ಎದುರುದಾರರು ಲಂಚದ ಹಣಕೊಡಲು ಕೇಳಿದರು, ಆಗ ದೂರುದಾರರು ಅವರ ಬಳಿಯಿದ್ದ ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ನೀಡಿದಾಗ, ಎದುರುದಾರರು ಅವರ ಎಡಗೈನಿಂದ ಪುಡಿಲೇಪಿತ ನೋಟುಗಳನ್ನು ತೆಗೆದುಕೊಂಡು ಅವರ ಶರ್ಟಿನ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ತನಿಖಾಧಿಕಾರಿಯವರ ತಂಡ ದೂರುದಾರರನ್ನು ಮತ್ತು ನೆರಳುಸಾಕ್ಷಿಯನ್ನು ಹಿಂಬಾಲಿಸಿ ಹೋಟೆಲ್‌ನ ಬಳಿ ಮರೆಯಲ್ಲಿ ನಿಂತಿದ್ದು, ದೂರುದಾರರು ಹೋಟೆಲ್ ಒಳಗೆ ಕುಳಿತು ಸುಮಾರು ರಾತ್ರಿ 8.15 ಗಂಟೆಗೆ ಅವರ ಕರವಸ್ತ್ರದಿಂದ ಮುಖ ಒರೆಸುವ ಮೂಲಕ ಸೂಚನೆ ನೀಡಿದಾಗ ತನಿಖಾಧಿಕಾರಿಯವರು, ಅವರ ತಂಡದೊಂದಿಗೆ ಧಾವಿಸಿ ದೂರುದಾರರ ಬಳಿ ಬಂದಿದ್ದು, ಆಗ ದೂರುದಾರರು ಎದುರುದಾರರನ್ನು ತೋರಿಸಿದ ಮೇರೆಗೆ, ತನಿಖಾಧಿಕಾರಿಯವರು ಎದುರುದಾರರನ್ನು ವಶಕ್ಕೆ ಪಡೆದು ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ಸದರಿ ಹೋಟೆಲ್ ಮಾಲೀಕನಿಗೆ ತನಿಖಾಧಿಕಾರಿಯವರು ಕೋಣೆಯ ವ್ಯವಸ್ಥೆ ಮಾಡಿಕೊಡಲು ತಿಳಿಸಿದಾಗ ಹೋಟೆಲ್‌ನ ಉತ್ತರ ದಿಕ್ಕಿಗೆ ಇರುವ ಕೋಣೆಯನ್ನು ನೀಡಿರುತ್ತಾರೆ. ತನಿಖಾಧಿಕಾರಿಯವರು ಸಿಬ್ಬಂದಿಗಳ ಸಹಾಯದಿಂದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎರಡು ಬಟ್ಟಲುಗಳಲ್ಲಿ ಸದರಿ ದ್ರಾವಣವನ್ನು ತೆಗೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ಯಾವುದೇ ಬಣ್ಣಕ್ಕೆ

ತಿರುಗಿರುವುದಿಲ್ಲ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ಪ್ರತ್ಯೇಕವಾಗಿ ಆ ದ್ರಾವಣಗಳನ್ನು ವಶಪಡಿಸಿಕೊಂಡಿರುತ್ತಾರೆ. ದೂರುದಾರರಿಂದ ಪಡೆದ ಹಣದ ಬಗ್ಗೆ ಎದುರುದಾರರನ್ನು ವಿಚಾರಿಸಿದಾಗ, ಎದುರುದಾರರು ಅವರ ಶರ್ಟಿನ ಎಡಜೇಬಿನಲ್ಲಿ ಇರುವುದಾಗಿ ತಿಳಿಸಿದ್ದು, ತನಿಖಾಧಿಕಾರಿಯು ಪಂಚಸಾಕ್ಷಿ-1 ಶ್ರೀ. ಗುಡುಸಾಹೇಬರವರಿಂದ ಹಣವನ್ನು ಹೊರತೆಗೆಸಿ ಪರಿಶೀಲಿಸಲಾಗಿ, ಆ ನೋಟುಗಳ ವಿವರಗಳು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನಮೂದಿಸಿದ ಹಾಳೆಯ ಹಾಗೂ ಪಂಚನಾಮೆಯ ವಿವರಗಳಿಗೆ ತಾಳೆಯಾದ್ದರಿಂದ, ಆ ನೋಟುಗಳನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ಎದುರುದಾರರಿಗೆ ಬದಲಿ ಶರ್ಟಿನ ವ್ಯವಸ್ಥೆಮಾಡಿ ಅವರು ಧರಿಸಿದ್ದ ಶರ್ಟ್‌ನ್ನು ಪಡೆದು ಪುಡಿಲೇಪಿತ ನೋಟುಗಳನ್ನು ಇಟ್ಟುಕೊಂಡಿದ್ದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯು ಆ ಶರ್ಟ್‌ನ್ನು ಮತ್ತು ದ್ರಾವಣವನ್ನು ವಶಪಡಿಸಿಕೊಂಡಿರುತ್ತಾರೆ.

ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ಅವರ ಸಮಜಾಯಿಷಿಯಲ್ಲಿ "ದಿ: 21/04/2018ರಂದು ಸಾಯಂಕಾಲ ಹೊರಗಡೆ ಹೋಗುತ್ತಿರುವಾಗ ಶ್ರೀ. ಬಿಜ್ಜರಗಿ ಎಂಬಾತನು ಕಾಲುವೆ ಸಂಬಂಧಿಸಿದ ಕಾಮಗಾರಿ ಕುರಿತು ಕೆಲವು ಸಹಿ ಮಾಡುವುದಿದೆ ಎಂದು ವಿನಂತಿಸಿಕೊಂಡನು. ಸದರಿ ಕಾಮಗಾರಿಯು ಈಗಾಗಲೇ ಮುಗಿದು ಹೋಗಿರುವುದರಿಂದ ಅವನು ತಂದ ಪೇಪರುಗಳಿಗೆ ಸಹಿಮಾಡಿ ಕೊಟ್ಟಿರುತ್ತೇನೆ. ಸಹಿಮಾಡಿಕೊಟ್ಟ ನಂತರ ಒತ್ತಾಯಪೂರ್ವಕವಾಗಿ ದುಡ್ಡನ್ನು ಕಿಸೆಯಲ್ಲಿ ಇಡಲು ಪ್ರಯತ್ನಿಸಿದನು ಅದಕ್ಕೆ ಪ್ರತಿರೋಧ ಒಡ್ಡಿದರು ಬಲವಂತವಾಗಿ ಕಿಸೆಯಲ್ಲಿ ಇಟ್ಟಿರುತ್ತಾನೆ" ಎಂದು ಬರೆದುಕೊಟ್ಟಿರುತ್ತಾರೆ. ದೂರುದಾರರು ಮತ್ತು ನೆರಳುಸಾಕ್ಷಿ ಸದರಿ ಸಮಜಾಯಿಷಿಯನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಇ.ಎಂ.ಡಿ. ಮತ್ತು ಎಫ್.ಎಸ್.ಡಿ. ಬಿಲ್ ಮೇಲೆ ಸಹಿ ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡಿರುತ್ತಾರೆಂದು ದೂರುದಾರರು ತಿಳಿಸಿರುತ್ತಾರೆ. ತನಿಖಾಧಿಕಾರಿಯು ಪ್ರಾಯೋಗಿಕಾ ಪಂಚನಾಮೆ ಸಮಯದಲ್ಲಿ ಲಿಪಿಕರಣಗೊಳಿಸಿದ ಸಂಭಾಷಣೆಯನ್ನು ಎದುರುದಾರರಿಗೆ ಮತ್ತು ದೂರುದಾರರಿಗೆ ಓದಲು ತಿಳಿಸಿ, ಅವರ ಮಾದರಿಯ ಧ್ವನಿಯ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡು ನಂತರ ಲ್ಯಾಪ್‌ಟಾಪ್ ಮೂಲಕ ಎದುರುದಾರರ ಮಾದರಿಧ್ವನಿಯನ್ನು ಐದು ಸಿ.ಡಿ.ಗಳಿಗೆ ಮತ್ತು ದೂರುದಾರರ

ಮಾದರಿಧ್ವನಿಯನ್ನು ಐದು ಸಿ.ಡಿ.ಗಳಿಗೆ ವರ್ಗಾಯಿಸಿ ವಶಕ್ಕೆ ಪಡೆದಿರುತ್ತಾರೆ. ನಂತರ ಎದರುದಾರರನ್ನು ದಸ್ತಗಿರಿ ಮಾಡಿ ಎಲ್ಲರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯು ಮಾದರಿ ಧ್ವನಿಯೊಂದಿಗೆ ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ಆ ಕಾರಣ, ಎದುರುದಾರರ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ತನಿಖಾಧಿಕಾರಿಯು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಮತ್ತು ತಜ್ಞರ ವರದಿಗಳನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 06/12/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಅವರ ಆಕ್ಷೇಪಣೆಯ ಜೊತೆ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ (ವಿಶೇಷ ನ್ಯಾಯಾಲಯ) ವಿಜಯಪುರ, ವಿಶೇಷ ಪ್ರಕರಣ ಸಂ.01/2019ರಲ್ಲಿ ಮಾನ್ಯ ನ್ಯಾಯಾಲಯವು ಎದುರುದಾರರನ್ನು ಪ್ರಕರಣದಿಂದ ಬಿಡುಗಡೆ ಮಾಡಿರುವ ಆದೇಶವನ್ನು ಲಗತ್ತಿಸಿರುತ್ತಾರೆ. ಅಲ್ಲದೆ, ಅವರ ಸಮಜಾಯಿಷಿಯಲ್ಲಿ ವಿಶೇಷ ಪ್ರಕರಣ ಸಂ.01/2019ರ ತೀರ್ಪಿನ ಅಂಶಗಳನ್ನು ಉಲ್ಲೇಖಿಸಿರುತ್ತಾರೆ. ಎದುರುದಾರರನ್ನು ವಿಶೇಷ ಪ್ರಕರಣದಲ್ಲಿ ಬಿಡುಗಡೆ ಮಾಡಿರುವುದರಿಂದ, ಈ ಕಚೇರಿಯಲ್ಲಿ ಯಾವುದೇ ಇಲಾಖಾ ವಿಚಾರಣೆ ನಡೆಸಬಾರದೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಕಾರಣ, ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಮತ್ತು ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯು ಮಾದರಿ ಧ್ವನಿಯೊಂದಿಗೆ ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ಅಲ್ಲದೆ, **ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು, ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ವಿರುದ್ಧ ದಿಲೀಪ್ ಉತ್ತಮ್ ಜೈಬೆ ಪ್ರಕರಣ ಸಂ.ಕ್ರಿಮಿನಲ್ ಅಪೀಲ್ 7403/21, ದಿ: ದಿ: 03/01/2022ರ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯು ಬಿಡುಗಡೆ ಹೊಂದಿದರೂ ಸಹ ಇಲಾಖಾ ವಿಚಾರಣೆ ಪ್ರಕ್ರಿಯೆಯನ್ನು ಕೈಗೊಳ್ಳಬಹುದೆಂದು ತೀರ್ಪಿನಲ್ಲಿ** ಉಲ್ಲೇಖಿಸಿದೆ.

ನಂ.ಕಂಪ್ಲೇಂಟ್/ಉಪಲೋಕ್/ಬಿಜಿಎಂ/1811/2021
ಪಿ.ಓ. ಎಆರ್‌ಇ-06

ಈ ಎಲ್ಲಾ ಕಾರಣಗಳಿಂದ ಮತ್ತು ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂ ಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/4/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.